ನೇತ್ರಾವತಿ ಎಚ್‌.ಆರ್‌.

ಕಲೆ: ಗಣೇಶ್ ಆಚಾರ್ಯ

# ನರಿಯ ದುರಾಸೆ

ಒಂದು ಕಾಡಿನಲ್ಲಿ ನರಿಯೊಂದಿತ್ತು. ಅದರ ಹೊಟ್ಟೆ ತುಂಬಿಸಲು ಪ್ರತಿದಿನ ಅದೆಷ್ಟೋ ಪ್ರಾಣಿಗಳು ಬಲಿಯಾಗುತ್ತಿದ್ದವು. ಒಮ್ಮೊಮ್ಮೆ ಹೊಟ್ಟೆ ತುಂಬಿದ್ದರೂ ಜೊತೆಯಲ್ಲಿ ತನ್ನ ಇತರೆ ಗೆಳೆಯರನ್ನು ಸೇರಿಸಿಕೊಂಡು ಕೈಗೆ ಸಿಕ್ಕ ಮೊಲ, ಪಕ್ಷಿಗಳನ್ನೆಲ್ಲಾ ಹಿಡಿದು ಕೊಂದು ಬಿಸಾಡುತ್ತಿತ್ತು. ನರಿಯ ಈ ಉಪಟಳದಿಂದ ಚಿಕ್ಕಚಿಕ್ಕ ಪ್ರಾಣಿಗಳ ಸಂಖ್ಯೆ ಕಡಿಮೆಯಾಗಿ ಉಳಿದಿದ್ದ ಕೆಲವು ಪ್ರಾಣಿಗಳು ಆ ಕಾಡು ಬಿಟ್ಟು ವಲಸೆ ಹೋದವು. ಪಕ್ಷಿಗಳು ಆದಷ್ಟು ನರಿಯ ಕೈಗೆ ಸಿಗದಂತೆ ಮೇಲೆಯೇ ಹಾರಾಡುತ್ತಿದ್ದವು.

ಇತ್ತ ನರಿಗೆ ಕಾಡಿನಲ್ಲಿ ಯಾವ ಪ್ರಾಣಿಗಳೂ ಸಿಗದೆ ಹಸಿವು ಹೆಚ್ಚಾಯಿತು. ಅದೊಂದು ದಿನ ಆಹಾರ ಹುಡುಕಿಕೊಂಡು ಕಾಡಿನಿಂದ ನಾಡಿಗೆ ವಲಸೆ ಬಂದಿತು. ನಾಡಿನಲ್ಲಿ ಬಣ್ಣಬಣ್ಣದ ಕೋಳಿಗಳನ್ನು ನೋಡಿ ಅದರ ಬಾಯಲ್ಲಿ ನೀರೂರಿತು. ಹೇಗಾದರೂ ಮಾಡಿ ಈ ಕೋಳಿಗಳನ್ನು ಹಿಡಿಯಬೇಕು ಎಂದು ಹೊಂಚು ಹಾಕಿತು. ಕೋಳಿಗಳ ಗುಂಪಿನಲ್ಲಿ ಸ್ವಲ್ಪ ದಪ್ಪಗೆ ಎತ್ತರವಾಗಿದ್ದ ಒಂದು ಕೋಳಿಯ ಹತ್ತಿರ ಬರುವಷ್ಟರಲ್ಲಿ ನರಿಯನ್ನು ನೋಡಿದ ಇತರೆ ಕೋಳಿಗಳು ‘ಕೊ... ಕೊ... ಕೋ... ಕೋ...’ ಎಂದು ಕೂಗುತ್ತ ಚೆಲ್ಲಾಪಿಲ್ಲಿಯಾದವು. ಆದರೂ ನರಿ ಒಂದು ಸಣ್ಣ ಕೋಳಿಯನ್ನು ಹಿಡಿದು ಬಾಯಲ್ಲಿ ಕಚ್ಚಿಕೊಂಡು ಕಾಡಿನ ಕಡೆ ಓಡಿತು.

ಕೋಳಿ ಮಾಂಸದ ರುಚಿ ನರಿಗೆ ತುಂಬಾ ಹಿಡಿಸಿತು. ‘ಅಬ್ಬಾ, ಒಳ್ಳೆಯ ರುಚಿಯಾದ ಭೋಜನ... ದಿನಾ ಆ ಮೊಲಗಳ ಮಾಂಸ ತಿಂದು ನಾಲಿಗೆ ಜಿಡ್ಡುಗಟ್ಟಿ ಹೋಗಿತ್ತು’ ಎಂದು ತೃಪ್ತಿಯಿಂದ ಕೋಳಿಯನ್ನು ಸವಿಯಿತು.

ಮಾರನೇ ದಿನ ನರಿಯು ಮತ್ತೆ ಕೋಳಿಗಳ ಗುಂಪಿನ ಹತ್ತಿರ ಬಂತು. ಹಿಂದಿನ ದಿನ ನಡೆದ ಘಟನೆಯಿಂದ ಹೆದರಿದ್ದ ಕೋಳಿಗಳು ಸ್ವಲ್ಪ ಜಾಗರೂಕತೆಯಿಂದ ಇದ್ದವು. ದೂರದಲ್ಲಿ ನರಿ ಬರುತ್ತಿರುವುದನ್ನು ನೋಡಿದ ಕೋಳಿಗಳ ಹಿಂಡು ತಮ್ಮತಮ್ಮ ಮನೆಯ ದಾರಿ ಹಿಡಿದವು. ನರಿಗೆ ತುಂಬಾ ನಿರಾಸೆಯಾಯಿತು. ಇಡೀ ದಿನ ಉಪವಾಸ ಇದ್ದಿದ್ದರಿಂದ ನರಿ ಸಂಜೆಯಾಗುವ ತನಕ ಕೋಳಿಗಳ ಗುಂಪನ್ನೇ ನೋಡುತ್ತ ಕುಳಿತಿತ್ತು. ಹೋಗಿ ಹಿಡಿಯಬೇಕೆಂದರೆ ಕೋಳಿಗಳು ಮನುಷ್ಯರ ನಡುವೆಯೇ ಅಡ್ಡಾಡುತ್ತಿದ್ದವು. ಕತ್ತಲಾಗುತ್ತಲೇ ಕೋಳಿಗಳ ಒಡತಿಯರು ಅವುಗಳನ್ನು ಬುಟ್ಟಿಯಲ್ಲಿ ಹಾಕಿಕೊಂಡು ಮುಚ್ಚಿಡಲು ನಡೆದರು. ನರಿಯೂ ಸಹ ಅವರಿಗೆ ಕಾಣದಂತೆ ಹಿಂಬಾಲಿಸಿ ಕೋಳಿಗಳನ್ನು ಮುಚ್ಚುವ ಜಾಗವನ್ನು ಕಂಡುಕೊಂಡಿತು. ರಾತ್ರಿ ಎಲ್ಲರೂ ಮಲಗಿದ ನಂತರ ಯಾರಿಗೂ ತಿಳಿಯದಂತೆ ಸಂದಿಯಿಂದ ತೂರಿ ಬುಟ್ಟಿಯಲ್ಲಿ ಮುಚ್ಚಿದ್ದ ಕೋಳಿಗಳಲ್ಲಿ ಒಂದನ್ನು ನಿಧಾನವಾಗಿ ಹಿಡಿದುಕೊಂಡು ವಾಪಸ್ಸು ಬಂದಿತು. ಹೀಗೆ ಪ್ರತಿದಿನ ಒಂದೊಂದು ಮನೆಗೆ ನುಗ್ಗಿ ಕೋಳಿಗಳನ್ನು ಹಿಡಿದು ತಿನ್ನಲಾರಂಭಿಸಿತು.

